# ಕರ್ನಾಟಕ ವಿಧಾನ ಪರಿಷತ್

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 102
**ಸದಸ್ಯರ ಹೆಸರು** : ಶ್ರೀ ಡಿ.ಟಿ ಶ್ರೀನಿವಾಸ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ)
**ಉತ್ತರಿಸುವ ದಿನಾಂಕ** : 11.08.2025.
**ಉತ್ತರಿಸುವ ಸಚಿವರು** : ಮಾನ್ಯ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಾಡುಗೋಡಿ ಸರ್ವೆ ನಂ:1 ಯಾರಿಗೆ ಸೇರಿದೆ ಹಾಗೂ ಎಷ್ಟು ಎಕರೆ ಇದೆ: (ಮಾಹಿತಿ ನೀಡುವುದು) | ಕಾಡುಗೋಡಿ ಸರ್ವೆ ನಂ.01 ಅರಣ್ಯ ಇಲಾಖೆಗೆ ಸೇರಿರುತ್ತದೆ ಹಾಗೂ 711 ಎಕರೆ ಪ್ರದೇಶದ ವಿಸ್ತೀರ್ಣವಿರುತ್ತದೆ.<br><br>ಬೆಂಗಳೂರು ಪೂರ್ವ ತಾಲ್ಲೂಕು. ಬಿದರಹಳ್ಳಿ ಹೋಬಳಿ. ಕಾಡುಗೋಡಿ ಪ್ಲಾಂಟೇಶನ್ ಸರ್ವೆ ನಂ.1 (711 ಎಕರೆ) ಪ್ರದೇಶವನ್ನು ಅರಣ್ಯ ನಿಯಮಾವಳಿ 1878ರ ಸೆಕ್ಷನ್-9 ರಂತೆ ಮೈಸೂರು ಗೆಜೆಟ್ ಅಧಿಸೂಚನೆ ಸಂಖ್ಯೆ: 10407-ಎಫ್‌ಟಿ.ಎಫ್.153-95 ದಿನಾಂಕ: 29 ಮೇ 1896 ರಂತೆ ಸರ್ಕಾರಿ ನೆಡುತೋಪುಗಳು ಎಂದು ಹಾಗೂ ಮೈಸೂರು ಗೆಜೆಟ್ ಅಧಿಸೂಚನೆ ಸಂಖ್ಯೆ: 422-ಎಫ್‌ಟಿ-ಎಫ್-15-1900 ದಿನಾಂಕ: 07 ಜನವರಿ 1901 ರಂತೆ 'ರಾಜ್ಯ ಅರಣ್ಯ' ಎಂದು ಘೋಷಿಸಿ ದಿನಾಂಕ: 31. ಜನವರಿ 1901 ರಲ್ಲಿ ಮೈಸೂರು ಗೆಜೆಟ್ ಪತ್ರದಲ್ಲಿ ಪ್ರಕಟಿಸಲಾಗಿರುತ್ತದೆ. ಕಾಡುಗೋಡಿ ಪ್ಲಾಂಟೇಶನ್ ಸರ್ವೆ ನಂ.1 ಪಹಣಿಯಲ್ಲಿ ಕಲಂ(2)ರಲ್ಲಿ ಒಟ್ಟು 711-00 ಎ/ಗುಂಟೆ ಇದ್ದು. ಕಲಂ-09ರಲ್ಲಿ ಕರ್ನಾಟಕ ಅರಣ್ಯ ಇಲಾಖೆ ರವರ ಹೆಸರಿಗೆ ಎಂ.ಆರ್.ನಂ.ಹೆಚ್1/15-16 ರಂತೆ 711-00 ಎ/ಗುಂಟೆ ಎಂದು ನಮೂದಾಗಿರುತ್ತದೆ. |
| ಆ) | ಈ ಸರ್ವೆ ನಂಬರ್‌ನಲ್ಲಿ ಉಳುಮೆ ಮಾಡಿಕೊಂಡ ರೈತರ ಹಾಗೂ ಇತರರ ಸಂಖ್ಯೆ ಎಷ್ಟು: (ಮಾಹಿತಿ ನೀಡುವುದು) | ಯಾವುದೇ ರೈತರು ಉಳುಮೆ ಮಾಡುತ್ತಿರುವುದಿಲ್ಲ. |
| ಇ) | ಇಲ್ಲಿಯ ಜಾಗವನ್ನು ಬೇರೆ ಬೇರೆ ಇಲಾಖೆಗಳಿಗೆ ನೀಡಲಾಗಿದೆಯೇ: ನೀಡಿದ್ದಲ್ಲಿ, ಎಷ್ಟು ಜಾಗವನ್ನು ಮಂಜೂರು ಮಾಡಲಾಗಿದೆ: | ಅರಣ್ಯ ಭೂಮಿಯನ್ನು ಅರಣ್ಯೇತರ ಉಪಯೋಗಕ್ಕೆ ಮಂಜೂರು ಮಾಡಲು ಅವಕಾಶವಿರುವುದಿಲ್ಲ. ಆದರೆ ಅರಣ್ಯ (ಸಂರಕ್ಷಣ) ಕಾಯ್ದೆ 1980ರಡಿ ಅರಣ್ಯ ಭೂಮಿಯನ್ನು ಅರಣ್ಯೇತರ ಉಪಯೋಗಕ್ಕೆ ಗುತ್ತಿಗೆ ನೀಡಲು ಅವಕಾಶವಿದ್ದು, ಕಾಡುಗೋಡಿ ಸರ್ವೆ ನಂ.1ರಲ್ಲಿ ಗುತ್ತಿಗೆ ನೀಡಲಾದ ವಿವರ ಈ ಕೆಳಕಂಡಂತಿದೆ.<br><br>1) ಕೇಂದ್ರ ಸರ್ಕಾರದ ಆದೇಶ ಸಂಖ್ಯೆ: No.F.No.4-KRC-1165/2018-BAN/1342 dated 18.12.2019 ಮತ್ತು ರಾಜ್ಯ ಸರ್ಕಾರದ ಆದೇಶ ಸಂಖ್ಯೆ: G.O. No. FEE-57-FLL-2018 dated: 19.05.2020 ರಂತೆ 44ಎ-30ಗು ಪ್ರದೇಶವನ್ನು ಬಿ.ಎಂ.ಆರ್.ಸಿ.ಎಲ್. ಸಂಸ್ಥೆಗೆ ಮೆಟ್ರೋ ಕಾಮಗಾರಿಗಾಗಿ ಅರಣ್ಯ (ಸಂರಕ್ಷಣಾ) ಕಾಯ್ದೆ. 1980ರನ್ವಯ ನಿಗಧಿತ ಉದ್ದೇಶಕ್ಕೆ ಗುತ್ತಿಗೆ ನೀಡಲಾಗಿದೆ.<br><br>2) ಕೇಂದ್ರ ಸರ್ಕಾರದ ಆದೇಶ ಸಂಖ್ಯೆ: No.F.No.4-KRB/1481/2023-BAN/566 dated 03.04.2024 (in-principal approval) ರಂತೆ 6-00ಎಕರೆ ಪ್ರದೇಶವನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರಿಗೆ construction of Ground Level Reservoir (GLR) under Cauvery Water Supply Scheme (CWSS) Stage-V along Eastern Route CP-12 ಕಾಮಗಾರಿಗಾಗಿ ಅರಣ್ಯ (ಸಂರಕ್ಷಣಾ) ಕಾಯ್ದೆ. 1980ರನ್ವಯ ನಿಗಧಿತ ಉದ್ದೇಶಕ್ಕೆ ಗುತ್ತಿಗೆ ನೀಡಲಾಗಿದೆ. |

| | | |
|---|---|---|
| ಈ) | ಸರ್ವೆ ನಂ:01ಕ್ಕೆ ಸಂಬಂಧಪಟ್ಟಂತೆ ಎಷ್ಟು ರೈತರಿಗೆ ಜಮೀನು ಮಂಜೂರು ಮಾಡಲಾಗಿದೆ; ಮಂಜೂರು ಮಾಡಿದ್ದಲ್ಲಿ, ಪ್ರತಿ ಕುಟುಂಬಕ್ಕೆ ಎಷ್ಟು ಎಕರೆ ಜಮೀನು ನೀಡಲಾಗಿದೆ; ಜಮೀನು ಮಂಜೂರಾತಿಯಲ್ಲಿರುವ ದಲಿತರ ಸಂಖ್ಯೆ ಎಷ್ಟು; ಇತರರ ಸಂಖ್ಯೆ ಎಷ್ಟು; | ಕಾಡುಗೋಡಿ ಪ್ಲಾಂಟೇಶನ್ ಸರ್ವೆ ನಂ.01ರಲ್ಲಿ ಅರಣ್ಯ ಇಲಾಖೆಯಿಂದ ರೈತರಿಗೆ ಯಾವುದೇ ಜಮೀನು ಮಂಜೂರು ಮಾಡಿರುವುದಿಲ್ಲ. |
| ಉ) | ಆ ಕುಟುಂಬಗಳಿಗೆ ಪರ್ಯಾಯವಾಗಿ ಜಾಗದ ವ್ಯವಸ್ಥೆ ಕಲ್ಪಿಸಲಾಗಿದೆಯೇ (ಮಾಹಿತಿ ನೀಡುವುದು)? | ಮೇಲಿನ ಕಾರಣದನ್ವಯ ಅನ್ವಯಿಸುವುದಿಲ್ಲ. |

**ಸಂಖ್ಯೆ: FEE/193/FLL/2025**

**(ಈಶ್ವರ ಬಿ. ಖಂಡ್ರೆ)**

ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು